ಕರ್ನಾಟಕ ಭವನದಲ್ಲಿರುವ ವಿಶೇಷಾಯುಕ್ತರ ಕಛೇರಿಯಲ್ಲಿ.

೨೧೭. ಶ್ರೀ ಬಿ. ಎ. ಉಮಾರಬ್ಬ (ವಿಟ್ಲ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದೆಹಲಿ ಕರ್ನಾಟಕ ಭವನದಲ್ಲಿರುವ ನೌಕರರ ಸಂಖ್ಯೆ ಎಷ್ಟು ?

ಆ) ಇವರಲ್ಲಿ ಕನ್ನಡಿಗರು ಎಷ್ಟು ಜನ ?

ಇ) ಸದರಿ ಭವನದಲ್ಲಿ ರಾಜ್ಯದ ಶಾಸಕರುಗಳಿಗೆ ಕೊಠಡಿಗಳು ದೊರೆಯದೆ ತೊಂದರೆ ಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಈ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಯವರು).—

ಅ) ಕರ್ನಾಟಕ ಭವನದಲ್ಲಿರುವ ವಿಶೇಷಾಯುಕ್ತರ ಕಛೇರಿಯಲ್ಲಿ ೧೪
ಕರ್ನಾಟಕ ಭವನದಲ್ಲಿ ೬೦

ಆ) ಕರ್ನಾಟಕ ಭವನದಲ್ಲಿರುವ ವಿಶೇಷಾಯುಕ್ತರ ಕಛೇರಿಯಲ್ಲಿ ೯
ಕರ್ನಾಟಕ ಭವನದಲ್ಲಿ ೧೬

ಇ) ಹೌದು.

ಈ) ಎರಡನೆಯ ಕರ್ನಾಟಕ ಭವನವನ್ನು ನಿರ್ಮಿಸಲಾಗುತ್ತಿದೆ.

ಕರ್ನಾಟಕ ಮತ್ತು ಮಹಾರಾಷ್ಟ್ರ ಬಗ್ಗೆ.

೧೨. ಶ್ರೀ ಕೆ. ಹೆಚ್. ಪಾಟೀಲ್ (ಗದಗ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ಮತ್ತು ಮಹಾರಾಷ್ಟ್ರದ ಗಡಿಯ ಬಗ್ಗೆ ಈ ಸದನದ ನಿರ್ಣಯವನ್ನು ಕಾರ್ಯಗತ ಗೊಳಿಸಲು ಕೈಗೊಂಡಿರುವ ಕ್ರಮಗಳೇನು ?

ಶ್ರೀ ರಾಮಕೃಷ್ಣ ಹೆಗಡೆ (ಮಾನ್ಯ ಮುಖ್ಯ ಮಂತ್ರಿಗಳು).—

ಅ) ಕರ್ನಾಟಕ ಸರ್ಕಾರವು ಮಹಾಜನ ವರದಿಯನ್ನು ಅನುಷ್ಠಾನಕ್ಕೆ ತರುವಂತೆ ನಿರಂತರವಾಗಿ ಒತ್ತಾಯಿಸುತ್ತಿದೆ. ಈ ವಿಷಯವಾಗಿ ಮುಖ್ಯಮಂತ್ರಿಗಳು ದಿನಾಂಕ ೨೦-೮-೧೯೮೫, ೧೧-೯-೮೫ ಮತ್ತು ೯-೧೦-೧೯೮೫ ರಂದು ಮೂರು ಪತ್ರಗಳನ್ನು ಪ್ರಧಾನ ಮಂತ್ರಿಗಳಿಗೆ ಬರೆದಿದ್ದು ಮಹಾಜನ ವರದಿಯು ಅಂತಿಮವೆಂದೂ, ಇದರಲ್ಲಿ ಹೊಂದಾಣಿಕೆಗೆ ಅವಕಾಶವಿಲ್ಲವೆಂದೂ, ಮತ್ತು ಇದನ್ನು ಅನುಷ್ಠಾನಕ್ಕೆ ತರದಿದ್ದರೆ ಕರ್ನಾಟಕಕ್ಕೆ ಕೇವ, ಅನ್ಯಾಯವಾಗುವುದೆಂದೂ ಈ ಪತ್ರಗಳಲ್ಲಿ ಪ್ರಧಾನಿಗಳಿಗೆ ಮನವರಿಕೆ ಮಾಡಿಕೊಡಲಾಗಿದೆ. ಭಾರತ ಸರಕಾರದಿಂದ ಈ ಬಗ್ಗೆ ಮುಂದಿನ ಕ್ರಮ ನಿರೀಕ್ಷಿಸಲಾಗುತ್ತಿದೆ.

ಗಡ್ಡಿ ಹೊಳೆ ಯಾತ ನೀರಾವರಿ ಯೋಜನೆ ಕುರಿತಂ.

೨೩೦. ಶ್ರೀ ಎಂ. ಎಲ್. ಮಂತ್ರಣ್ಣನವರ್ (ಗೋಕಾಕ್).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗೋಕಾಕ್ ತಾಲ್ಲೂಕಿನ ಗಡ್ಡಿಹೊಳೆ ಯಾತ ನೀರಾವರಿ ಯೋಜನೆಯ ಅಂದಾಜು ವೆಚ್ಚ ಎಷ್ಟು ?

ಆ) ಈ ಯೋಜನೆಯಿಂದ ನೀರಾವರಿಯಾಗುವ ಕ್ಷೇತ್ರ ಎಷ್ಟು?

ಇ) ಈ ಯೋಜನೆಯನ್ನು ಯಾವಾಗ ಕೈಗೊಳ್ಳಲಾಗುವುದು ?